ಕಳುಹಿಸಿಕೊಡುತ್ತೇನೆ. ಮುಂದಿನ ಪ್ರಶ್ನೆ ಅವರು ಕೇಳಿರುವುದು ಎಂದರೆ 'ಈ ಬರಗಾಲವನ್ನು ಎದುರಿಸಲು ಸರ್ಕಾರದವರು ಹಾಕಿಕೊಂಡಿರುವ ಪರಿಹಾರ ಕಾಮಗಾರಿಗಳು ಯಾವುವು' ಎಂದಿದ್ದಾರೆ. ಅದಕ್ಕೆ ಉತ್ತರವಾಗಿ 'ಅವಶ್ಯವಿರುವೆಡೆಗಳಲ್ಲಿ ಕುಡಿಯುವ ನೀರು, ಮೇವು ಹಾಗೂ ಅವಶ್ಯವಿರುವ ಕೃಷಿ ಕೂಲಿಕಾರರು ಮತ್ತು ಸಣ್ಣ : ಅತಿಸಣ್ಣ ರೈತರುಗಳಿಗೆ ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದಿದ್ದೇವೆ. ಇದಕ್ಕೇನು ಹೇಳಬೇಕು. ಯಾವ ರೀತಿಯ ಉತ್ತರವನ್ನು ಹೇಳಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಈಗ ತಾವು 17 ಜಿಲ್ಲೆಗಳಲ್ಲಿನ 70 ತಾಲ್ಲೂಕುಗಳಲ್ಲಿ ಮಾತ್ರ ಮಳೆ ಕೊರತೆ ಇದೆ ಎಂದು ಹೇಳಿದ್ದೀರಿ. ಸನ್ಮಾನ್ಯ ನಾಣಯ್ಯನವರು, ಕೊಡಗು ಜಿಲ್ಲೆಯಲ್ಲಿ ಭತ್ತ ನಾಟಿಯಾಗಿಲ್ಲ ಎಂದು ಹೇಳಿ ಹೇಳಿದರು. ಮಳೆಯಾಗಿಲ್ಲ. ಅದಕ್ಕೋಸ್ಕರ ಈಗಿರುವಂಥ ವಾಸ್ತವ ಸ್ಥಿತಿಯನ್ನು ಎಷ್ಟು ತಾಲ್ಲೂಕುಗಳಲ್ಲಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮೊದಲು ಅವರಿಗೆ ಉತ್ತರವನ್ನು ಹೇಳಿ. ನ್ಯಾಚುರಲ್ ಕೆಲಾಮಿಟಿಯಲ್ಲಿ ಫಂಡ್ ಎಷ್ಟು ಇಟ್ಟಿದ್ದೀರಿ ಎಂದು ಹೇಳಿ. ಅದಕ್ಕೆ ಮೊದಲು ಹೇಳಿ. ನಂತರ ಅವರ ಸಪ್ಲಿಮೆಂಟರಿಗೂ ಉತ್ತರವನ್ನು ಕೊಡಿ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ವಿವರವಿದೆ ನಾನು ಆ ವಿವರಗಳನ್ನೆಲ್ಲ ಕೊಡುತ್ತೇನೆ. ಸಧ್ಯಕ್ಕೆ ಇಷ್ಟೇ ಉತ್ತರ ಸಾಕುಎಂದು ಹೇಳಿ ಅಂದುಕೊಂಡಿದ್ದೇನೆ. ಮಿಕ್ಕ ವಿವರಗಳನ್ನು ನಾನು ಒದಗಿಸಿಕೊಡುತ್ತೇನೆ. ಆಮೇಲೆ ಕೋಲಾರ ಜಿಲ್ಲೆಯಲ್ಲಿ ಯಾವ ವಿಶೇಷ ಕಾರ್ಯಕ್ರಮಗಳಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಕೇಳಿದ್ದಾರೆ.

ಶ್ರೀ ವಿ. ಮುನಿಯಪ್ಪ:- ನ್ಯಾಚುರಲ್ ಕೆಲಾಮಿಟಿ ರಿಲೀಫ್ ಫಂಡ್‌ನಿಂದ ಎಷ್ಟು ಹಣ ಬಿಡುಗಡೆ ಮಾಡಿದೆ ಎಂದು ನಿರ್ದಿಷ್ಟವಾದ ಉತ್ತರ ಬೇಕು ಕೋಲಾರ ಜಿಲ್ಲೆ ಬಗ್ಗೆ. ಅದರಲ್ಲೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಎಷ್ಟು ಕೊಟ್ಟಿದ್ದೀರಿ?

ಶ್ರೀ ಆರ್.ಎಲ್. ಜಾಲಪ್ಪ: ಚರ್ಚೆ ಬಂದಾಗ ಆ ಡೀಟೆಲ್ಸ್ ಎಲ್ಲಾ ಕೊಡುತ್ತೇನೆ. ಕೋಲಾರಕ್ಕೆ ಸೀಆರ್ ಎಫ್‌ನಲ್ಲಿ ನಾವು ಹಣ ರಿಲೀಸ್ ಮಾಡಿರುವುದು 80 ಲಕ್ಷ. ಅದು ಕುಡಿಯುವ ನೀರು ಮತ್ತು ಇತರ ಕೆಲಸಗಳಿಗೋಸ್ಕರ. ಆರ್‌ಡಿಪಿಆರ್‌ನವರು 178 ಲಕ್ಷ ರೂಪಾಯಿಗಳನ್ನು ಕೋಲಾರ ಜಿಲ್ಲೆಗೆ ರಿಲೀಸ್ ಮಾಡಿದ್ದಾರೆ. ಈಗ ಅದನ್ನೇ ನಾವು ಹೇಳಿರುವುದು. ಕುಡಿಯುವ ನೀರಿನ ಪೂರೈಕೆಗಾಗಿ ಎರಡೂ ಕಡೆಯಿಂದ ಸೇರಿ 258 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ ಕೋಲಾರ ಜಿಲ್ಲೆಗೆ. ಉದ್ಯೋಗ ಸೃಜನೆಗೆ 1392.67 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಮತ್ತು ಮೇವಿನ ಸರಬರಾಜಿಗೆ ಐದು ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ.

ಇನ್ನು ಮಿಕ್ಕಿದ್ದು ಎಷ್ಟೆಷ್ಟು ಕೆಲಸಗಳಾಗಿವೆ ಎನ್ನುವ ವಿವರಗಳು ನಮ್ಮ ಹತ್ತಿರ ಬಂದಿಲ್ಲ.

ಸಾರಿಗೆ ಇಲಾಖೆಯಲ್ಲಿ ಡೀಲಕ್ಸ್ ಬಸ್ಸುಗಳ ಕವಚ ನಿರ್ಮಾಣ ಕುರಿತು.

445- ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಇಲಾಖೆಯಲ್ಲಿ ಎರಡು ಪ್ರಾದೇಶಿಕ ಕಾರ್ಯಗಾರವಿದ್ದರೂ ಸಹ ಡಿಲಕ್ಸ ಬಸ್ಸುಗಳಿಗೆ ಕವಚ ನಿರ್ಮಾಣ ಮಾಡಲು ಎ.ಸಿ.ಜಿ.ಎಲ್. ಗೋವ ಕಂಪನಿಗೆ ಕೊಟ್ಟಿರುವ ಉದ್ದೇಶವೇನು? ಎಷ್ಟು ಚಾಸಿಗಳನ್ನು ಕವಚ ನಿರ್ಮಾಣ ಮಾಡಲು ನೀಡಲಾಗಿದೆ?

ಆ) ಇದರಿಂದ ಸಾರಿಗೆ ಸಂಸ್ಥೆಗೆ ತಗಲುವ ಅಧಿಕ ವೆಚ್ಚವೆಷ್ಟು? ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುದಿರಲು ಕಾರಣಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು):

ಅ) ಸಾರಿಗೆ ಸಂಸ್ಥೆಯು ಮೆ. ಎ.ಸಿ.ಜಿ.ಎಲ್. ಗೋವ ಸಂಸ್ಥೆಗೆ ಸುವಿಹಾರಿ ಬಸ್ಸುಗಳ ನಿರ್ಮಾಣವನ್ನು ವಹಿಸುತ್ತಿಲ್ಲ. ಪ್ರಸ್ತುತವಾಗಿ ಸಾರಿಗೆ ಸಂಸ್ಥೆಯ ಯಾವ ಚಾಸಿಯೂ ಮೆ: ಎ.ಸಿ.ಜಿ.ಎಲ್. ಸಂಸ್ಥೆಯಲ್ಲಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಎಸಿಜಿಎಲ್ ಗೋವಾ ಸಂಸ್ಥೆಗಳಿಗೆ ಸುವಿಹಾರಿ ಬಸ್‌ಗಳ ನಿರ್ಮಾಣವನ್ನು ವಹಿಸುತ್ತಿಲ್ಲ ಮತ್ತು ಯಾವ ಚಾಸಿಯು ಕೂಡ ಆ ಸಂಸ್ಥೆಯಲ್ಲಿ ಇಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ನಾನು ಕ್ಲಾರಿಫಿಕೇಷನ್ ಕೇಳುವಂಥದ್ದು ಈ ಹಿಂದೆ ಏನಾದರೂ ಕೂಡ ಎಸಿಜಿಎಲ್ ಕಂಪನಿಗೆ ಆರ್ಡರ್ ಕೊಟ್ಟಿದ್ದಿರೇ? ಎಷ್ಟು ಚಾಸಿಗಳನ್ನು ಕೊಟ್ಟಿದ್ದಿರಿ? ಎಷ್ಟು ಬಾಡಿಗಳು ಹೊರಗಡೆ ಬಂದವು? ಅಥವಾ ಅದು ಇಲ್ಲ ಎಂದರೆ ಮುಂದೆ ಕೊಡಬೇಕು ಎನ್ನುವುದು. ನಿಮಗೆ ಒಂದು ಅಧೀನ ಸಂಸ್ಥೆಯಾಗಿ ಕೆಎಸ್ಆರ್‌ಟಿಸಿ ಸಂಸ್ಥೆ ಇದೆ. ಆ ಸಂಸ್ಥೆ ವ್ಯಾಪ್ತಿಯಲ್ಲಿ ಕೊಡಬೇಕು ಎನ್ನುವ ತೀರ್ಮಾನವೇನಾದರೂ ಮಾಡಿದ್ದರೆ ಎಷ್ಟು ಬಸ್‌ಗಳಿಗೆ ಕೊಡಬೇಕೆಂದು ಮಾಡಿದ್ದೀರಿ? ಅದೇನು ಕಾರ್ಯಕ್ರಮವಾಗಿದೆ ದಯವಿಟ್ಟು ತಿಳಿಸಿ.

ಶ್ರೀ ಕೆ.ಎಸ್. ಬೀಳಗಿ: ಮಾನ್ಯ ಅಧ್ಯಕ್ಷರೇ, ಈ ಗೋವಾದ ಎಸಿಜಿಎಲ್ ಕಂಪನಿಗೆ ಈ ಸುವಿಹಾರಿ ಬಸ್‌ಗಳ ಕವಚ ಬಿಲ್ಡಿಂಗ್ ಕೆಲಸವನ್ನು ಈಗ ಕೊಡುವುದಿಲ್ಲ. ಮುಂದೆಯೂ ಕೂಡ ಕೊಡುವ ಒಂದು ಉದ್ದೇಶ ಇಟ್ಟುಕೊಂಡಿಲ್ಲ ನಾವು ಆದರೆ 93-94 ನೇ ಇಸವಿಯಲ್ಲಿ ಹತ್ತು ವರ್ಷಗಳ ಕಾಲ ಬಾಡಿ ಬಿಲ್ಡಿಂಗ್‌ಗೆ ಅವರಿಗೆ ಕೊಟ್ಟಿದ್ದವು. 94-95 ರಲ್ಲಿ 25 ಬಸಗಳನ್ನು ಬಾಡಿ ಬಿಲ್ಡ್ ಮಾಡಲಿಕ್ಕೆ ಕೊಟ್ಟಿದ್ದವು. ಈಗ ಎಲ್ಲಾ ಬಸ್‌ಗಳು ಬಂದಿದೆ. 1-12-94ಕ್ಕೆ ಲಾಸ್ಟ್ ಬಸ್‌ನ್ನು ಅಲ್ಲಿಂದ ನಾವು ರಿಸೀವ್ ಮಾಡಿಕೊಂಡಿದ್ದೇವೆ. ಇನ್ನು ಮುಂದೆ ಕೊಡುವ ಅವಶ್ಯಕತೆ ಇರುವುದಿಲ್ಲ. ನಮ್ಮ ನಿರ್ಧಾರ ಇದು ಬೇರೆ ಕಂಪನಿಗೆ ಕೊಡುವ ನಮ್ಮ ರಾಜ್ಯದಲ್ಲಿರುವ ಕೈಗಾರಿಕೆಗಳಿಂದ ಈ ಸುವಿಹಾರಿ ಬಸ್ ಬಾಡಿ ಬಿಲ್ಡಿಂಗನ್ನು ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ನಾನೊಂದು ವಿಷಯವನ್ನು ಹೇಳುತ್ತೇವೆ. ಈಗಾಗಲೇ ಕೇವಲ 35 ಬಸ್ ಕೊಟ್ಟಿದ್ದೀರಿ, ಬಂದಿದ್ದಾವೆ. ಅವುಗಳು ಬರುವುದರೊಳಗಾಗಿ ಕಿತ್ತುಹೋದವು. ಆ ಬಸ್‌ಗಳು ಯಾವುವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹತ್ತು ಸಾವಿರಕ್ಕೂ ಹೆಚ್ಚು ಬಸ್ ಇರುವುದು ನಮ್ಮದೇ ಆದಂಥ ಎರಡು ರೀಜನಲ್ ವರ್ಕ್‌ಷಾಪ್ ಇರುವ ಸಂದರ್ಭದಲ್ಲಿ, ಅದು

ಹೊರರಾಜ್ಯ ಗೋವಾಕ್ಕೆ ಹೋಗಿ ಕೊಡುವ ತೀರ್ಮಾನ ಮಾಡಿರುವುದರಲ್ಲಿ ಒಂದೊಂದು ಬಾಡಿ ಚಾಸಿ ಬಿಲ್ಡಿಂಗ್‌ನ್ನು ಕಟ್ಟುವಲ್ಲೂ ಕೂಡ ಎರಡು ಲಕ್ಷ ರೂಪಾಯಿಗಳ ಹೆಚ್ಚು ಅವ್ಯವಹಾರವಾಗಿರುವಂಥದ್ದು. 150 ಬಸ್‌ಗಳಿಗೆ ನೀವು ಚಾಸಿಯನ್ನು ಕೊಡಬೇಕು ಎನ್ನುವ ತೀರ್ಮಾನ ಮಾಡಿದ್ದೀರಿ. ಮೂರು ಕೋಟಿ ರೂಪಾಯಿಗೂ ಹೆಚ್ಚು ಅವ್ಯವಹಾರ ನಡೆಯುವ ಸಂದರ್ಭ ಇದೆ. ದಯಮಾಡಿ ಈಗಾಗಲೇ ಕೊಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಅಕಸ್ಮಾತ್ ಯಾವುದಾದರೂ ಒತ್ತಾಯಕ್ಕೋಸ್ಕರ ಕೊಟ್ಟಿದ್ದೇ ಆದರೆ ಬಹುಶಃ ತಾವು ರಾಜೀನಾಮೆ ಕೊಡುವ ಪ್ರಶ್ನೆ ಬರಬಹುದು ಎನ್ನುವುದರ ಬಗ್ಗೆ ತಾವು ನಿರ್ದಿಷ್ಟವಾಗಿ ಹೇಳಿ. ನಾವು ಕೊಡುವುದಿಲ್ಲ ಇನ್ನು ಮುಂದೆ, ನಮ್ಮ ಸಂಸ್ಥೆಯಲ್ಲಿ ಮಾಡುತ್ತೇವೆ ಎನ್ನುವ ತೀರ್ಮಾಣವನ್ನು ಖಚಿತವಾಗಿ ಹೇಳಬೇಕು.

ಅಧ್ಯಕ್ಷರು: ಆಯಿತು ಬಿಡಿ. ನೀವು ಅದನ್ನು ಕೊಟ್ಟಮೇಲೆ ರಾಜೀನಾಮೆಯನ್ನು ಕೊಡಬೇಕಾಗಿರುವುದು. ಈಗಿಲ್ಲ.

ದ. ಕನ್ನಡ ಜಿಲ್ಲೆಯಲ್ಲಿನ ಮುಜರಾಯಿ ಸಂಸ್ಥೆಗಳಿಗೆ ತಸ್ತೀಕ್ ಹಣ ಮಂಜೂರಾತಿ.

1369-ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಸರ್ಕಾರದವರು ನೀಡುತ್ತಿರುವ ತಸ್ತಿಕ್‌ನ ಮೊತ್ತ ಎಷ್ಟು?

ಆ) ಸರ್ಕಾರದವರು ನೀಡುತ್ತಿರುವ ಈ ಕನಿಷ್ಠ ಮೊತ್ತದ ತಸ್ತಿಕ್‌ನ ಮೊತ್ತವನ್ನು ಹೆಚ್ಚು ಮಾಡುವ ವಿಚಾರವನ್ನು ಹೊಂದಿದೆಯೇ?

ಇ) ಆದಾಯವಿಲ್ಲದ ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಪ್ರತಿವರ್ಷವೂ ರೂ. 84109 ತಸ್ತಿಕ್ ಅನ್ನು ನೀಡಲಾಗುತ್ತದೆ.

ಆ) ಇಲ್ಲ

ಇ) ದೇವಸ್ಥಾನಗಳ ಜೀರ್ಣೋದ್ಧಾರದ ಬಗ್ಗೆ ಸರ್ಕಾರದಿಂದ ಪ್ರತಿ ವರ್ಷ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. ಆಯವ್ಯಯದಲ್ಲಿ ಈ ಬಗ್ಗೆ ಒದಗಿಸಲಾಗುವ ಅನುದಾನದ ಆಧಾರದ ಮೇಲೆ ಮತ್ತು ಈ ಬಗ್ಗೆ ದೇವಾಲಯಗಳಿಂದ ಬರುವ ಬೇಡಿಕೆಗಳ ಆಧಾರದ ಮೇಲೆ ಈ ಸಹಾಯಧನ ಮಂಜೂರು ಮಾಡಲಾಗುತ್ತಿದೆ.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 1418 ದೇವಸ್ಥಾನಗಳಿವೆ. ಸರ್ಕಾರ 84 ಸಾವಿರ ರೂಪಾಯಿಗಳನ್ನು ತಸ್ತೀಕ್ ಹಣವನ್ನು ಬಿಡುಗಡೆಗೊಳಿಸಿದೆ